# ಮೈಸೂರು ವಿಶ್ವವಿದ್ಯಾನಿಲಯ

**ದಿನಾಂಕ 9-12-2019ರಂದು ಮಧ್ಯಾಹ್ನ 12.00 ಗಂಟೆಗೆ ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ಜರುಗಿದ ಸಿಂಡಿಕೇಟ್ ಆರನೇ ಸಾಮಾನ್ಯ ಸಭೆಯ ನಡವಳಿಗಳು**.

**ಹಾಜರಿದ್ದ ಸದಸ್ಯರು:**

| | | |
|---|---|---|
| 1. ಪ್ರೊ. ಜಿ. ಹೇಮಂತಕುಮಾರ್ | – | ಕುಲಪತಿಗಳು ಹಾಗೂ ಅಧ್ಯಕ್ಷರು |
| 2. ಶ್ರೀ ಆರ್. ಮೂಗೇಶಪ್ಪ<br>ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ,ಬೆಂಗಳೂರು | – | ಸದಸ್ಯರು |
| 3. ಡಾ. ಎಸ್. ಮದಿಅಳಗನ್ | – | ಸದಸ್ಯರು |
| 4. ಕು. ಸಹನಾ ಶಿವಪ್ಪ | – | ಸದಸ್ಯರು |
| 5. ಶ್ರೀ. ಸಿ. ಜಯರಾಮ | – | ಸದಸ್ಯರು |
| 6. ಡಾ. ಕೆ. ಕೆ. ವಿಶಾಲಾಕ್ಷಿ | – | ಸದಸ್ಯರು |
| 7. ಶ್ರೀ. ಜಿ. ಅಶ್ವತನಾರಾಯಣ | – | ಸದಸ್ಯರು |
| 8. ಶ್ರೀ. ಕೆ. ಟಿ. ಅಪ್ಪಾಜಪ್ಪ | – | ಸದಸ್ಯರು |
| 9. ಪ್ರೊ. ಕೆ. ಎಂ. ಮಹದೇವನ್<br>ಕುಲಸಚಿವರು (ಪರೀಕ್ಷಾಂಗ) | – | ಸದಸ್ಯರು |
| 10. ಪ್ರೊ. ಟಿ. ಎಸ್. ದೇವರಾಜ | – | ವಿಶೇಷ ಆಹ್ವಾನಿತರು |
| 11. ಪ್ರೊ. ಆರ್. ಶಿವಪ್ಪ | – | ಕುಲಸಚಿವ ಹಾಗೂ ಸದಸ್ಯ ಕಾರ್ಯದರ್ಶಿ |

**ಹಾಜರಾಗದ ಸದಸ್ಯರು:**

12. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
13. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
14. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
15. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ

ಮೊದಲಿಗೆ ಸನ್ಮಾನ್ಯ ಕುಲಪತಿಗಳು ಸಿಂಡಿಕೇಟ್‌ನ ಆರನೇ ಸಾಮಾನ್ಯ ಸಭೆಗೆ ಆಗಮಿಸಿದ್ದ ಎಲ್ಲಾ ಸದಸ್ಯರುಗಳನ್ನು ಅಹ್ವಾನಿಸಿದರು.

ನಂತರ ಮಾತನಾಡಿದ ಕುಲಸಚಿವರು ಸಭೆಯ ಸದಸ್ಯರನ್ನು ಮತ್ತೊಮ್ಮೆ ಸ್ವಾಗತಿಸಿದರು ಹಾಗೂ ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ ಬೆಂಗಳೂರು ಇವರ ಪರವಾಗಿ ಶ್ರೀ ಆರ್.ಮೂಗೇಶಪ್ಪ, ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ, ಮೈಸೂರು ಇವರನ್ನು ಪರಿಚಯಿಸಿ ಸಭೆಗೆ ಸ್ವಾಗತಿಸಿದರು.

ಡಾ. ಎಸ್. ಮದಿಅಳಗನ್, ಡೀನರು, ಶಿಕ್ಷಣ ನಿಕಾಯ, ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಜ್ಞಾನ ಅಧ್ಯಯನ ವಿಭಾಗ, ಮೈಸೂರು, ಇವರನ್ನು ಸಹ ಸಭೆಗೆ ಸ್ವಾಗತಿಸಿ ಪರಿಚಯಿಸಿದರು.

ಹಾಗೂ ಇದುವರೆವಿಗೂ ಸಿಂಡಿಕೇಟ್ ಸದಸ್ಯರಾಗಿ ಸೇವೆ ಸಲ್ಲಿಸಿ ನಿರ್ಗಮಿಸಿರುವ ಪ್ರೊ. ಮಹದೇವ, ಡೀನರು, ಕಲಾ ನಿಕಾಯ, ಇಂಗ್ಲಿಷ್ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರ ಸೇವೆಯನ್ನು ಸ್ಮರಿಸಿ ದಾಖಲಿಸಲಾಯಿತು.

ನಂತರ ಕಾರ್ಯಸೂಚಿಯನ್ನು ಚರ್ಚೆಗೆ ಕೈಗೆತ್ತಿಕೊಳ್ಳಲಾಯಿತು.

| ವಿಷಯ ಸಂಖ್ಯೆ | ವಿಷಯ ಸಂಕ್ಷಿಪ್ತವಾಗಿ |
|---|---|
| I | ದಿನಾಂಕ: 23-10-2019ರಂದು ನಡೆದ ಸಿಂಡಿಕೇಟಿನ ಐದನೇ ಸಾಮಾನ್ಯ ಸಭೆಯ ನಡವಳಿಯನ್ನು ದೃಢೀಕರಿಸುವ ಬಗ್ಗೆ. |
| **ತೀರ್ಮಾನ** | ದಿನಾಂಕ: 23-10-2019ರಂದು ನಡೆದ ಸಿಂಡಿಕೇಟಿನ ಐದನೇ ಸಾಮಾನ್ಯ ಸಭೆಯ ನಡವಳಿಯನ್ನು ದೃಢೀಕರಿಸಲಾಯಿತು. |
| II | ದಿನಾಂಕ: 23-08-2019ರಂದು ನಡೆದ ಸಿಂಡಿಕೇಟಿನ ನಾಲ್ಕನೇ ಸಾಮಾನ್ಯ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳ ಬಗ್ಗೆ ಕ್ರಮ ಕೈಗೊಂಡ ವರದಿ. |
| **ತೀರ್ಮಾನ** | ದಿನಾಂಕ: 23-08-2019ರಂದು ನಡೆದ ಸಿಂಡಿಕೇಟಿನ ನಾಲ್ಕನೇ ಸಾಮಾನ್ಯ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳ ಬಗ್ಗೆ ಕ್ರಮ ಕೈಗೊಂಡ ವರದಿಯನ್ನು ಗಮನಿಸಲಾಯಿತು. |
| III | ದಿನಾಂಕ: 11-09-2019ರಂದು ನಡೆದ ಸಿಂಡಿಕೇಟಿನ ವಿಶೇಷ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳ ಬಗ್ಗೆ ಕ್ರಮ ಕೈಗೊಂಡ ವರದಿ. |
| **ತೀರ್ಮಾನ** | ದಿನಾಂಕ: 11-09-2019ರಂದು ನಡೆದ ಸಿಂಡಿಕೇಟಿನ ವಿಶೇಷ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳ ಬಗ್ಗೆ ಕ್ರಮ ಕೈಗೊಂಡ ವರದಿಯನ್ನು ಗಮನಿಸಲಾಯಿತು. |
| 2019/12.1 | ಅಧ್ಯಯನ ಮಂಡಳಿಗಳನ್ನು ಹೊಸದಾಗಿ ರಚಿಸಿರುವ ಬಗ್ಗೆ – ಅನುಸಮರ್ಥನೆಗಾಗಿ. |
| | 1. B.Sc Aviation and BBA Aviation Hospitality and Tourism (Under Graduate)<br>2. Ayurveda and Yogic Science (Post Graduate)<br>3. B.Sc. Optometry (Under Graduate)<br><br>ಮೇಲ್ಕಂಡ ಅಧ್ಯಯನ ಮಂಡಳಿಗಳನ್ನು Maharaja Aviation Academy, Academic Institute of Ayurveda and Yogic Sciences and Malabar Institute of Optometry ಸಂಸ್ಥೆಯವರು ಹೊಸದಾಗಿ ಅಧ್ಯಯನ ಮಂಡಳಿಗಳನ್ನು ರಚಿಸಿ ಕೊಡಬೇಕಾಗಿ ಕೋರಿರುತ್ತಾರೆ.<br><br>ಶೈಕ್ಷಣಿಕ ಹಿತದೃಷ್ಟಿಯಿಂದ ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ, ಮೇಲ್ಕಂಡ ಅಧ್ಯಯನ ಮಂಡಳಿಯನ್ನು ಮೂರು ವರ್ಷಗಳ ಅವಧಿಗೆ ಹೊಸದಾಗಿ ರಚಿಸಿ ಅಧಿಸೂಚನೆಯನ್ನು ಹೊರಡಿಸಲಾಗಿತ್ತು.<br><br>ವಿಶ್ವವಿದ್ಯಾನಿಲಯವು ತೆಗೆದುಕೊಂಡಿರುವ ಮೇಲ್ಕಂಡ ಕ್ರಮವನ್ನು ಸಿಂಡಿಕೇಟ್ ಸಭೆಯ ಅನುಸಮರ್ಥನೆಗಾಗಿ ಮಂಡಿಸಿದೆ. |
| **ತೀರ್ಮಾನ** | ಶೈಕ್ಷಣಿಕ ಹಿತದೃಷ್ಟಿಯಿಂದ ವಿಶ್ವವಿದ್ಯಾನಿಲಯವು ತೆಗೆದುಕೊಂಡಿರುವ ಕ್ರಮವನ್ನು ಹಾಗೂ ಮೂರು ವರ್ಷಗಳ ಅವಧಿಗೆ ಹೊಸದಾಗಿ ಅಧ್ಯಯನ ಮಂಡಳಿಗಳನ್ನು ರಚಿಸಿ ಅಧಿಸೂಚನೆಯನ್ನು ಹೊರಡಿಸಿರುವುದನ್ನು ಸಿಂಡಿಕೇಟ್ ಸಭೆಯು ಗಮನಿಸಿ ಅನುಸಮರ್ಥಿಸಿತು. |
| 2019/12.2 | ವಿಶ್ವವಿದ್ಯಾನಿಲಯದ 100ನೇ ವಾರ್ಷಿಕ ಘಟಿಕೋತ್ಸವದ ಸಂಬಂಧ ದಿನಾಂಕ, ಸಮಯ, ಸ್ಥಳ ನಿಗಧಿಪಡಿಸುವ ಹಾಗೂ ಮುಖ್ಯ ಅತಿಥಿಗಳನ್ನು ಆಹ್ವಾನಿಸುವ ಬಗೆಗೆ. |
| **ತೀರ್ಮಾನ** | ವಿಶ್ವವಿದ್ಯಾನಿಲಯದ 100ನೇ ವಾರ್ಷಿಕ ಘಟಿಕೋತ್ಸವಕ್ಕೆ ಸಂಬಂಧಿಸಿದಂತೆ ಮುಖ್ಯ ಅತಿಥಿಗಳಾಗಿ ಪ್ರಧಾನ ಮಂತ್ರಿಗಳನ್ನು ಅಹ್ವಾನಿಸಲು ಜನವರಿ, ಫೆಬ್ರವರಿ ಹಾಗೂ ಮಾರ್ಚಿ 2020ರ ಅಂತ್ಯದವರೆಗೆ ಕಾಯ್ದು ಅವರು ಆಗಮಿಸದಿದ್ದಲ್ಲಿ ರಾಷ್ಟ್ರಪತಿ ಅಥವಾ ಉಪರಾಷ್ಟ್ರಪತಿಯವರನ್ನು ಅಹ್ವಾನಿಸಲು ಸಭೆಯು ತೀರ್ಮಾನಿಸಿತು.<br><br>ಮಾನ್ಯ ಪ್ರಧಾನ ಮಂತ್ರಿಯವರ ಆಗಮನವಾದಲ್ಲಿ ಕಾರ್ಯಕ್ರಮವನ್ನು Ampi Theatre, ಮಾನಸಗಂಗೋತ್ರಿಯಲ್ಲಿ ನಡೆಸಲಾಗುವುದು. ಅವರು ಆಗಮಿಸದಿದ್ದಲ್ಲಿ ಕ್ರಾಫರ್ಡ್ ಹಾಲ್‌ನಲ್ಲಿ ನಡೆಸಲು ತೀರ್ಮಾನಿಸಲಾಯಿತು. |

| | |
|---|---|
| 2019/12.3 | 100ನೇ ವಾರ್ಷಿಕ ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್ ಪದವಿ ಪಡೆಯಲು ಗಣ್ಯರ ಹೆಸರುಗಳನ್ನು ಶಿಫಾರಸ್ಸು ಮಾಡುವ ಬಗ್ಗೆ. |
| **ತೀರ್ಮಾನ** | 100ನೇ ವಾರ್ಷಿಕ ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್ ಪದವಿ ಪಡೆಯಲು ಗಣ್ಯರ ಹೆಸರುಗಳ ಶಿಫಾರಸ್ಸಿನ ಪಟ್ಟಿಯನ್ನು ಸಿದ್ಧಪಡಿಸಲು ನಿಯಮಾನುಸಾರ ಒಂದು ಸಮಿತಿಯನ್ನು ರಚಿಸಬೇಕಿದ್ದು ಈ ಸಮಿತಿಗೆ ಅಧ್ಯಕ್ಷರನ್ನು ಹಾಗೂ ಸದಸ್ಯರನ್ನು ನಾಮನಿರ್ದೇಶಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲು ಹಾಗೂ ಈ ಸಮಿತಿಯು ಶಿಫಾರಸ್ಸು ಮಾಡುವ ಹೆಸರುಗಳ ಪಟ್ಟಿಯನ್ನು ರಾಜ್ಯಪಾಲರಿಗೆ ಕಳುಹಿಸಲು ಸಿಂಡಿಕೇಟ್ ತೀರ್ಮಾನಿಸಿತು. |
| 2019/12.4 | ಮೈಸೂರು ವಿಶ್ವವಿದ್ಯಾನಿಲಯದ ಸೇವೆಗೆ ಸೇರುವ ಪೂರ್ವದಲ್ಲಿ ಸಲ್ಲಿಸಿದ ಸೇವೆಯನ್ನು ಪಿಂಚಣಿ ಸೌಲಭ್ಯಗಳ ಲೆಕ್ಕಾಚಾರಕ್ಕೆ ಅರ್ಹತಾ ಸೇವೆಯಾಗಿ ಪರಿಗಣಿಸುವ ಬಗೆಗೆ. |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯದ ಪಿಂಚಣಿ ಅಧಿನಿಯಮ 1979ರ ಅನುಸಾರ ಡಾ.ಎಸ್.ಎಲ್.ಬೆಳಗಲಿ, ಪ್ರಾಧ್ಯಾಪಕರು, ಪರಿಸರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ವಿಶ್ವವಿದ್ಯಾನಿಲಯದ ಸೇವೆಗೆ ಸೇರುವ ಪೂರ್ವದಲ್ಲಿ ಅಧ್ಯಾಪಕರಾಗಿ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ದಿನಾಂಕ 6-2-1986 ರಿಂದ 11-10-1999ರವರೆಗೆ ಸಲ್ಲಿಸಿದ ಸೇವೆಯನ್ನು ಪಿಂಚಣಿ ಸೌಲಭ್ಯಗಳ ಲೆಕ್ಕಾಚಾರಕ್ಕೆ ಅರ್ಹತಾ ಸೇವೆಯಾಗಿ ಪರಿಗಣಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| 2019/12.5 | ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆ ಯಾದವಗಿರಿ, ಮೈಸೂರು ಈ ಸಂಸ್ಥೆ ವತಿಯಿಂದ ನಡೆಸುವ ಎರಡು ವರ್ಷದ ಶಿಕ್ಷಣ ಕೋರ್ಸಿನ (ಬಿ.ಎಡ್) ಪದವಿ ಕಾಲೇಜನ್ನು ಸ್ವಯಂ ಮುಚ್ಚುವಿಕೆ ಬಗ್ಗೆ. |
| **ತೀರ್ಮಾನ** | ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆ ಯಾದವಗಿರಿ, ಮೈಸೂರು ಈ ಸಂಸ್ಥೆ ವತಿಯಿಂದ ನಡೆಸುವ ಎರಡು ವರ್ಷದ ಶಿಕ್ಷಣ ಕೋರ್ಸಿನ (ಬಿ.ಎಡ್) ಪದವಿ ಕಾಲೇಜನ್ನು ಸ್ವಯಂ ಮುಚ್ಚುವಿಕೆಗೆ ತೀರ್ಮಾನಿಸಿ ಅಧ್ಯಾಪಕರು ಮತ್ತು ಅಧ್ಯಾಪಕೇತರ ಸಿಬ್ಬಂದಿಯವರಿಂದ No objection letters ಅನ್ನು ಪಡೆದು ದಿನಾಂಕ 19-8-2019 ರಲ್ಲಿ (ಪ್ರಾಂಶುಪಾಲರು ಮತ್ತು ಸಂಸ್ಥೆಯ ಅಧ್ಯಕ್ಷರು) ಮನವಿಯನ್ನು ಸಲ್ಲಿಸಿರುತ್ತಾರೆ.<br><br>ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ 65 (1) ಮತ್ತು (2) ರ ಪ್ರಕಾರ ಬಿ.ಇಡಿ ಕೋರ್ಸಿನ ಪದವಿ ಕಾಲೇಜನ್ನು ಸ್ವಯಂ ಮುಚ್ಚುವಿಕೆಗೆ ವಿಶ್ವವಿದ್ಯಾನಿಲಯದ ಪ್ರಾಧಿಕಾರದ ಸಿಂಡಿಕೇಟ್ ಸಭೆಯ ಅನುಮೋದನೆ ಪಡೆದು ರಾಜ್ಯ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಬೇಕಾಗಿರುವುದರಿಂದ ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಲಾಯಿತು. ಸಿಂಡಿಕೇಟ್ ಸಭೆಯು ಇದನ್ನು ಅನುಮೋದಿಸಿತು. |
| **2019/12.6** | ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಭಾಷಾಂತರ ವಿಭಾಗಕ್ಕೆ History of Religion ಎಂಬ ಗ್ರಂಥದ ಅನುವಾದ ಕಾರ್ಯಕ್ಕೆ ಒಬ್ಬ ಭಾಷಾಂತರ ತಜ್ಞರನ್ನು ಮತ್ತು ಒಬ್ಬ ಸಂಪಾದಕರನ್ನು ತಾತ್ಕಾಲಿಕವಾಗಿ ನೇಮಿಸಿಕೊಡುವ ಬಗ್ಗೆ. |
| **ತೀರ್ಮಾನ** | ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಭಾಷಾಂತರ ವಿಭಾಗಕ್ಕೆ History of Religion ಎಂಬ ಗ್ರಂಥದ ಅನುವಾದ ಕಾರ್ಯಕ್ಕೆ ಶ್ರೀ ಭಾ.ವೇ. ಶ್ರೀಧರ್ ರವರನ್ನು ಭಾಷಾಂತರ ತಜ್ಞರು ಮತ್ತು ಡಾ. ವೈ. ಸಿ. ಭಾನುಮತಿಯವರನ್ನು ಸಂಪಾದಕರನ್ನಾಗಿ ತಲಾ ರೂ.20,000/- ಸಂಭಾವನೆಯನ್ನು ನಿಗಧಿಪಡಿಸಿ ಇವರನ್ನು ತಾತ್ಕಾಲಿಕವಾಗಿ ನೇಮಿಸಿಕೊಳ್ಳಲು ಸಿಂಡಿಕೇಟ್ ಸಭೆಯು ಒಪ್ಪಿತು. |

| | |
|---|---|
| **2019/12.7** | ICBio Clinical Research Pvt. Ltd., #16, ICBio Tower, Yelahanka Main Road, Chikkabetahalli, Vidyaranyapura, Bangalore, ಇವರು ಈಗಾಗಲೇ ವಿಶ್ವವಿದ್ಯಾನಿಲಯದ ಮಾನ್ಯತೆ ಪಡೆದು ನಡೆಸುತ್ತಿರುವ ವಿವಿಧ ಕೋರ್ಸುಗಳ Specialized Centre ವಿಳಾಸವನ್ನು ಬದಲಾವಣೆ ಮಾಡುವ ಸಂಬಂಧ ಪರಿವೀಕ್ಷಣಾ ಸಮಿತಿ ಸಲ್ಲಿಸಿರುವ ವರದಿಗೆ ಅನುಮೋದನೆ ನೀಡುವ ಬಗ್ಗೆ. |
| **ತೀರ್ಮಾನ** | **ICBio Clinical Research Pvt. Ltd., #16, ICBio Tower, Yelahanka Main Road, Chikkabetahalli, Vidyaranyapura, Bangalore,** ಇವರು ಈಗಾಗಲೇ ವಿಶ್ವವಿದ್ಯಾನಿಲಯದ ಮಾನ್ಯತೆ ಪಡೆದು ನಡೆಸುತ್ತಿರುವ ವಿವಿಧ ಕೋರ್ಸುಗಳ Specialized Centre **ICBio Clinical Research Pvt.Ltd., Global Public School Campus, Near APMC, V.V.Nagar, 8th Cross, Kallahalli, Mandya-571401** ಇಲ್ಲಿಗೆ ವಿಳಾಸವನ್ನು ಬದಲಾವಣೆ ಮಾಡುವ ಸಂಬಂಧ ಪರಿವೀಕ್ಷಣಾ ಸಮಿತಿಯ ಶಿಫಾರಸ್ಸಿನನ್ವಯ ಸದರಿ ಸಂಸ್ಥೆಯ ವಿಳಾಸ ಬದಲಾವಣೆ ಮಾಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| **2019/12.8** | ಅಭಿವೃದ್ಧಿ ಅಧ್ಯಯನ ಸಂಸ್ಥೆಯಲ್ಲಿ ದಿನಾಂಕ: 14.10.2019 ರಂದು ನಡೆದ ಘಟನೆ ಮತ್ತು ಆರೋಪಗಳ ವರದಿ ನೀಡುವ ಬಗ್ಗೆ. |
| **ತೀರ್ಮಾನ** | ಅಭಿವೃದ್ಧಿ ಅಧ್ಯಯನ ಸಂಸ್ಥೆಯಲ್ಲಿ ದಿನಾಂಕ: 14.10.2019 ರಂದು ನಡೆದ ಘಟನೆ ಮತ್ತು ಆರೋಪಗಳ ವರದಿಯನ್ನು ಪರಿಶೀಲಿಸಿದ ಸಿಂಡಿಕೇಟ್ ಸಭೆಯು ತಾತ್ಕಾಲಿಕ ನೌಕರರುಗಳಾದ ಶ್ರೀ ಕೆ.ಟಿ.ಸಂದೀಪ್, ಶ್ರೀ ಬಿ.ಎಂ.ರಾಮಚಂದ್ರ ಮತ್ತು ಡಾ.ಹೆಚ್.ಎಂ.ಚಂದ್ರಶೇಖರ್, ಸಹಾಯಕ ಪ್ರಾಧ್ಯಾಪಕರು, ಅಭಿವೃದ್ಧಿ ಅಧ್ಯಯನ ಸಂಸ್ಥೆ ಹಾಗೂ ನಿರ್ದೇಶಕರು ಇವರಿಗೆ ಇನ್ನು ಮುಂದೆ ಈ ರೀತಿ ಒಬ್ಬರ ಮೇಲೆ ಒಬ್ಬರು ಆರೋಪಗಳು ಮಾಡುವುದು ಮರುಕಳಿಸದಂತೆ ಎಚ್ಚರಿಕೆ ವಹಿಸಬೇಕೆಂದು ನೋಟಿಸ್ ನೀಡಲು ಸಭೆಯು ತೀರ್ಮಾನಿಸಿತು. |
| **2019/12.9** | ಡಾ.ಜಾಕೀರ್ ಹುಸೇನ್ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ಆಹ್ವಾನಿಸುವ ಬಗೆಗೆ. |
| **ತೀರ್ಮಾನ** | ಡಾ.ಜಾಕೀರ್ ಹುಸೇನ್ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ಆಹ್ವಾನಿಸುವ ಸಂಬಂಧ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡುವುದಾಗಿ ಸಭೆಯು ತೀರ್ಮಾನಿಸಿತು. |
| **2019/12.10** | ಸ್ವಾಮಿ ವಿವೇಕಾನಂದ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ನೇಮಕ ಮಾಡುವ ಬಗೆಗೆ– ಅನುಸಮರ್ಥನೆಗಾಗಿ. |
| **ತೀರ್ಮಾನ** | ಸ್ವಾಮಿ ವಿವೇಕಾನಂದ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರಾಗಿ ಪ್ರೊ. ಶೇಷಗಿರಿರಾವ್ ಇವರನ್ನು ಮುಂಬರುವ ಶೈಕ್ಷಣಿಕ ವರ್ಷಕ್ಕೆ ಮುಂದುವರೆಸಲು ಸಭೆಯು ಅನುಸಮರ್ಥಿಸಿತು. |
| **2019/12.11** | Disposal of Writ Petitions filed by the non-selected candidates in 2007 teaching appointments-payment of professional charges to the University Advocates thereof-reg. |
| | Sri. Rajendra Kumar Sungay has written a letter dated 18-10-2019 to the University claiming Rs. 25,000/- for each case.<br><br>The University in its order bearing No. WPC/606/2012-13, dated 15-12-2015 has fixed the professional charges of Advocates who contest case on behalf of the University at Rs. 10,000/- per writ petition.<br><br>Sri. K.T.Mohan has also written a letter dated 18-10-2019 to the University, claiming Rs. 25,000/- for each case with a prayer to make the payment. |

| | |
|---|---|
| | The Professional charges fixed by the University for a writ petitions in a regular course is very less and in view of the long duration which took place for disposal of the petitions, the University is required to pay a minimum of Rs. 25,000/- per case which is a very reasonable amount considering the period and the efforts which the matters have been dismissed. |
| **Decision** | The Syndicate decided to enhance the fees from Rs. 10,000/- to Rs.25,000/- as a onetime measure. |
| **2019/12.12** | Retirement of Post-Graduate Teachers during the Calendar Year 2020. |
| | Retirement of Post-Graduate Teachers to retire from the University service who have attained the age of Superannuation or may continue the services of such teachers till the end of the academic year as per provisions under clause (3) of the Mysore University Employees (conditions of service) Statutes 1984, if they found physically fit and otherwise suitable, on re-employment basis. |
| **Decision** | The Syndicate decided to continue Post-Graduate teachers for the academic year and to re-appoint them on contractual basis, if required, till the end of the respective semesters on a consolidated pay. |
| **2019/12.13** | ಮೊಬೈಲ್ ಟವರ್ ಸ್ಥಾಪಿಸಲು ಅನುಮತಿ ನೀಡುವ ಬಗ್ಗೆ. |
| **ತೀರ್ಮಾನ** | Ascend Telecom Infrastructure Pvt.Ltd., ಸಿ.ವಿ.ರಾಮನ್ ನಗರ, ಬೆಂಗಳೂರು ಇವರಿಗೆ ಮೈಸೂರು ವಿಶ್ವವಿದ್ಯಾನಿಲಯದ ಆವರಣದಲ್ಲಿ 40x40 ಜಾಗದಲ್ಲಿ ಮೊಬೈಲ್ ಟವರ್‌ನ್ನು ಸ್ಥಾಪಿಸಲು ಇತಿಹಾಸ ಅಥವಾ ಕ್ರಾಫರ್ಡ್‌ಹಾಲ್‌ನ ದ್ವಿಚಕ್ರ ವಾಹನ ನಿಲುಗಡೆ ಸ್ಥಳ ಇವುಗಳಲ್ಲಿ ಯಾವುದಾದರೂ ಒಂದು ಸ್ಥಳದಲ್ಲಿ ಜಾಗವನ್ನು ನೀಡಲು ಸಭೆಯು ಅನುಮೋದಿಸಿತು. |
| **2019/12.14** | ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಸಂಶೋಧನಾ ವಿದ್ಯಾರ್ಥಿಗಳು ಸಂಶೋಧನಾ ಅವಧಿಯನ್ನು ವಿಸ್ತರಿಸುವಂತೆ ಕೋರಿರುವ ಬಗ್ಗೆ. |
| **ತೀರ್ಮಾನ** | ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಸಂಶೋಧನಾ ವಿದ್ಯಾರ್ಥಿಗಳು ಸಂಶೋಧನಾ ಅವಧಿಯನ್ನು 5 ವರ್ಷಕ್ಕೆ ವಿಸ್ತರಿಸಲು ಚರ್ಚೆಯ ನಂತರ ಸಭೆಯು **ಒಪ್ಪಿತು**. ಆದರೆ ಪ್ರತಿ ವರ್ಷ 25 ಸಂಶೋಧನಾ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗುತ್ತಿದೆ. ಇನ್ನು ಮುಂದೆ ಪ್ರತಿ ವರ್ಷ 25 ಸಂಶೋಧನಾ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವ ಬದಲು 20 ಸಂಶೋಧನಾ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲು ಸಭೆಯು ತೀರ್ಮಾನಿಸಿತು. |
| **2019/12.15** | ಮೈಸೂರು ವಿಶ್ವವಿದ್ಯಾನಿಲಯದ ಆವರಣದಲ್ಲಿ ಮೈಸೂರು ನಗರ ಸ್ಮಾರಕ ಚಿನ್ಹೆಯನ್ನು ಸ್ಥಾಪಿಸಲು ಅನುಮತಿ ನೀಡುವ ಬಗ್ಗೆ. |
| **ತೀರ್ಮಾನ** | ಮಂಕುತಿಮ್ಮ ಸ್ಟುಡಿಯೋಸ್, ಬೆಂಗಳೂರು ಇವರಿಗೆ ಮೈಸೂರು ವಿಶ್ವವಿದ್ಯಾನಿಲಯದ ಆವರಣದಲ್ಲಿ ಸ್ಮಾರಕ ಚಿಹ್ನೆಯನ್ನು ಸ್ಥಾಪಿಸಲು ಜಾಗವನ್ನು ನೀಡಲು ಸಭೆಯು ಅನುಮೋದಿಸಿತು. |

| | |
|---|---|
| **2019/12.16** | ಮೈಸೂರು ವಿಶ್ವವಿದ್ಯಾನಿಲಯದ ಸಂಪೂರ್ಣ ಸ್ಥಿರ, ಚರ ಸ್ವತ್ತುಗಳ ರಕ್ಷಣೆ ಸಂಬಂಧ ಹೊರಗುತ್ತಿಗೆ ಆಧಾರದ ಮೇಲೆ ಭದ್ರತಾ ಸಂಸ್ಥೆಯನ್ನು ನೇಮಿಸಿರುವ ಬಗ್ಗೆ- ಅನುಸಮರ್ಥನೆಗಾಗಿ. |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯದ ಸಂಪೂರ್ಣ ಸ್ಥಿರ, ಚರ ಸ್ವತ್ತುಗಳ ರಕ್ಷಣೆ ಸಂಬಂಧ ಹೊರಗುತ್ತಿಗೆ ಆಧಾರದ ಮೇಲೆ ಭದ್ರತಾ ಸಂಸ್ಥೆಯನ್ನು ನೇಮಿಸುವ ಸಂಬಂಧ ಟೆಂಡರ್ ಅಂಗೀಕಾರ ಪ್ರಾಧಿಕಾರ ಸಮಿತಿ ಸಭೆಯ ತೀರ್ಮಾನದನ್ವಯ ಮಾನ್ಯ ಕುಲಪತಿಗಳು ಶ್ರೀ. ರಂಗನಾಥ ಎಂಟರ್ ಪ್ರೈಸೆಸ್, ಮೈಸೂರು ಭದ್ರತಾ ಸಂಸ್ಥೆಯನ್ನು ನೇಮಿಸಲು ಆದೇಶ ನೀಡಿರುವುದರಿಂದ ಸದರಿ ಭದ್ರತಾ ಸಂಸ್ಥೆಗೆ ವಿಶ್ವವಿದ್ಯಾನಿಲಯವು ವಿಧಿಸಿರುವ ನಿಬಂಧನೆ ಮತ್ತು ಷರತ್ತುಗಳೊಡನೆ ಎರಡು ವರ್ಷಗಳ ಅವಧಿಗೆ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯಾದೇಶ ನೀಡಲು ದಿನಾಂಕ 20-11-2019 ರಂದು ವಿ.ವಿ. ಕಾರ್ಯಪಾಲಕ ಅಭಿಯಂತರರಿಗೆ ಅನುಮತಿಸಿತು.<br>ಈ ಸಂಬಂಧ, ವಿ.ವಿ.ಕಾರ್ಯಪಾಲಕ ಅಭಿಯಂತರರು ದಿನಾಂಕ 1-12-2019 ರಿಂದ 30-11-2021ರವರೆಗೆ ವಿಶ್ವವಿದ್ಯಾನಿಲಯಕ್ಕೆ ಭದ್ರತಾ ಸೇವೆಯನ್ನು ಒದಗಿಸಲು ಶ್ರೀ. ರಂಗನಾಥ ಎಂಟರ್ ಪ್ರೈಸೆಸ್, ಮೈಸೂರು ಇವರಿಗೆ ದಿನಾಂಕ 26-11-2019 ರಂದು ಕಾರ್ಯಾದೇಶ ನೀಡಿ ಒಡಂಬಡಿಕೆ ಮಾಡಿಕೊಂಡಿರುವುದನ್ನು ಸಭೆಯ ಮುಂದೆ ಮಂಡಿಸಲಾಯಿತು. ಸಭೆಯು ಇದನ್ನು ಅನುಸಮರ್ಥಿಸಿತು. ಹಾಗೂ ಕುಲಪತಿಯವರು ಸಂಬಳವನ್ನು ಹೆಚ್ಚಿಸುವುದರ ಬಗ್ಗೆ ಚರ್ಚಿಸುವುದಾಗಿ ತಿಳಿಸಿದರು. |
| **2019/12.17** | ಮಾನಸಗಂಗೋತ್ರಿ ಶಿಕ್ಷಣ ಸಂಸ್ಥೆಯ ನ್ಯೂನತೆಗಳ ಬಗ್ಗೆ ಚರ್ಚಿಸುವ ಸಂಬಂಧ ನಡೆಸಿರುವ ಸಿಂಡಿಕೇಟ್ ಉಪಸಮಿತಿ ಸಭೆಯ ನಡವಳಿ. |
| **ತೀರ್ಮಾನ** | ಮಾನಸಗಂಗೋತ್ರಿ ಶಿಕ್ಷಣ ಸಂಸ್ಥೆಯ ನ್ಯೂನತೆಗಳ ಬಗ್ಗೆ ಚರ್ಚಿಸುವ ಸಂಬಂಧ ನಡೆಸಿರುವ ಸಿಂಡಿಕೇಟ್ ಉಪಸಮಿತಿ ಸಭೆಯ ನಡವಳಿಗಳನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. ಹಾಗೂ ಎಲ್ಲಾ ಸದಸ್ಯರನ್ನು ಕರೆಸಿ ಚುನಾವಣೆಯನ್ನು ದಿನಾಂಕ 15ನೇ ಜನವರಿ 2020ರೊಳಗೆ ನಡೆಸಲು ತೀರ್ಮಾನಿಸಲಾಯಿತು ಮತ್ತು ಇದಕ್ಕೆ ಸಂಬಂಧಪಟ್ಟಂತೆ ಗೌರವ ಕಾರ್ಯದರ್ಶಿಯವರಿಗೆ ಪತ್ರವನ್ನು ಬರೆಯಲು ಸಹ ತೀರ್ಮಾನಿಸಲಾಯಿತು. |
| **2019/12.18** | ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸೇರಿದ ಸರಸ್ವತಿಪುರಂ ತೊಣಚಿಕೊಪ್ಪಲು ಬಡಾವಣೆಯಲ್ಲಿರುವ ನಿವೇಶನ ಸಂಖ್ಯೆ P-12.J ಜಾಗಕ್ಕೆ ಪರ್ಯಾಯವಾಗಿ ಶ್ರೀ ವಿದ್ಯಾತೀರ್ಥ ಇನ್ಸ್‌ಟಿಟ್ಯೂಟ್ ಆಫ್ ಕಲ್ಚರ್ ಇವರಿಂದ ಜಾಗವನ್ನು ಪಡೆಯುವ ಬಗ್ಗೆ. |
| | ವಿದ್ಯಾತೀರ್ಥ ಇನ್ಸ್‌ಟಿಟ್ಯೂಟ್ ಆಫ್ ಕಲ್ಚರ್ ರವರು ಈಗಾಗಲೇ ವಿಶ್ವವಿದ್ಯಾನಿಲಯದ P-12-J ಆಸ್ತಿಯಲ್ಲಿ ಕಟ್ಟಡ ನಿರ್ಮಾಣ ಮಾಡಿರುತ್ತಾರೆ. ವಿದ್ಯಾತೀರ್ಥ ಇನ್ಸ್‌ಟಿಟ್ಯೂಟ್ ಆಫ್ ಕಲ್ಚರ್ ರವರ P-12/P ಆಸ್ತಿಯ ಜಾಗವು ವಿಶ್ವವಿದ್ಯಾನಿಲಯದ P-12-J ಆಸ್ತಿಯು ಈ ಹಿಂದೆ ಖಾಲಿ ಇರುತ್ತದೆ. ಈ ಸಂಬಂಧ CITB ವತಿಯಿಂದ 'ಶ್ರೀ ವಿದ್ಯಾತೀರ್ಥ ಇನ್ಸ್‌ಟಿಟ್ಯೂಟ್ ಆಫ್ ಕಲ್ಚರ್' ಸಂಸ್ಥೆಗೆ ಮಂಜೂರಾಗಿರುವ ನಿವೇಶನವನ್ನು ವಿಶ್ವವಿದ್ಯಾನಿಲಯಕ್ಕೆ ಪರಸ್ಪರ ಅದಲು ಬದಲು ಮಾಡಿಕೊಳ್ಳಲು ಹಾಗೂ ವರ್ಗಾವಣೆ ಸಂಬಂಧ ತಗಲುವ ಶುಲ್ಕ/ಇತರೆ ವೆಚ್ಚಗಳನ್ನು ವಿದ್ಯಾತೀರ್ಥ ಇನ್ಸ್‌ಟ್ಯೂಟ್ ಸಂಸ್ಥೆಯವರು ಭರಿಸಬೇಕೆಂಬ ನಿಬಂಧನೆಗೊಳಪಟ್ಟು ಅವರು ಎಷ್ಟು ಜಾಗ ಕೊಡುತ್ತಾರೆ ಮತ್ತು ಅವರಿಗೆ ವಿಶ್ವವಿದ್ಯಾನಿಲಯದ ಜಾಗದಲ್ಲಿ ರಸ್ತೆ ಸೇರಿಸಿಕೊಂಡು ಕೊಡಲು ಒಪ್ಪಿದ್ದಲ್ಲಿ ವರ್ಗಾವಣೆ ಮಾಡುವ ಸಂಬಂಧ ಸಿಂಡಿಕೇಟ್ ಸಭೆಯ ಮುಂದೆ ಮಂಡಿಸಲಾಯಿತು. |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸೇರಿದ ಸರಸ್ವತಿಪುರಂ ತೊಣಚಿಕೊಪ್ಪಲು ಬಡಾವಣೆಯಲ್ಲಿರುವ ನಿವೇಶನ ಸಂಖ್ಯೆ P-12.J ಜಾಗಕ್ಕೆ ಪರ್ಯಾಯವಾಗಿ ಶ್ರೀ ವಿದ್ಯಾತೀರ್ಥ ಇನ್ಸ್‌ಟಿಟ್ಯೂಟ್ ಆಫ್ ಕಲ್ಚರ್ ಇವರಿಂದ P-12/P ಜಾಗವನ್ನು ಕಾನೂನು ತಜ್ಞರ ಅಭಿಪ್ರಾಯ ಪಡೆದು ಅದರಂತೆ ಕ್ರಮಕೈಗೊಳ್ಳಲು ಸಿಂಡಿಕೇಟ್ ತೀರ್ಮಾನಿಸಿತು. |

| | |
|---|---|
| **2019/12.19** | ಇಂಗ್ಲಿಷ್ ಅಧ್ಯಯನ ವಿಭಾಗದ ಅಧ್ಯಕ್ಷರನ್ನು ವಿದೇಶಿ ಭಾಷಾ ತರಗತಿಗಳನ್ನು ನಡೆಸಲು ಕೊಠಡಿಗಳನ್ನು ನೀಡಲು ಅಸಹಕಾರ ತೋರುತ್ತಿರುವ ಬಗ್ಗೆ. |
| **ತೀರ್ಮಾನ** | ವಿದೇಶಿ ಭಾಷಾ ತರಗತಿಗಳನ್ನು ನಡೆಸಲು ಅನುವಾಗುವಂತೆ ಕೊಠಡಿಗಳನ್ನು ನೀಡಲು ಇಂಗ್ಲಿಷ್ ಅಧ್ಯಯನ ವಿಭಾಗದ ಅಧ್ಯಕ್ಷರಿಗೆ ಸೂಚಿಸಲು ಸಿಂಡಿಕೇಟ್ ತೀರ್ಮಾನಿಸಿತು. |
| **2019/12.20** | ಅಧ್ಯಾಪಕೇತರ ಉದ್ಯೋಗಿಗಳ ವಿವಿಧ ವೃಂದದ ಅಂತಿಮ ಜೇಷ್ಠತಾ ಪಟ್ಟಿಯನ್ನು ಸಿದ್ಧಪಡಿಸಿರುವ ಬಗ್ಗೆ. |
| **ತೀರ್ಮಾನ** | ಅಧ್ಯಾಪಕೇತರ ಉದ್ಯೋಗಿಗಳ ವಿವಿಧ ವೃಂದದ ಅಂತಿಮ ಜೇಷ್ಠತಾ ಪಟ್ಟಿಯನ್ನು ಸಿದ್ಧಪಡಿಸಿರುವುದನ್ನು ಸಿಂಡಿಕೇಟ್ ಸಭೆಯು ಅನುಮೋದಿಸಲಾಯಿತು. |
| **2019/12.21** | ವಿಶ್ವವಿದ್ಯಾನಿಲಯಕ್ಕೆ ಸೇರಿದ ವಾಹನ ಸಂಖ್ಯೆ–ಕೆ.ಎ–೦೯, ಎಂ.ಎ–೩೫೯೩ರ ಝೈಲೋ ಅಪಘಾತಕ್ಕೀಡಾಗಿ ನ್ಯಾಯಾಲಯಕ್ಕೆ ದಂಡವನ್ನು ಪಾವತಿಸಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ತವ್ಯ ಲೋಪವೆಸಗಿರುವ ಉದ್ಯೋಗಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸುವ ಬಗ್ಗೆ. |
| **ತೀರ್ಮಾನ** | ವಿಶ್ವವಿದ್ಯಾನಿಲಯಕ್ಕೆ ಸೇರಿದ ವಾಹನ ಸಂಖ್ಯೆ–ಕೆ.ಎ–೦೯, ಎಂ.ಎ–೩೫೯೩ರ ಝೈಲೋ ಅಪಘಾತಕ್ಕೀಡಾಗಿ ನ್ಯಾಯಾಲಯಕ್ಕೆ ದಂಡವನ್ನು ಪಾವತಿಸಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ತವ್ಯ ಲೋಪವೆಸಗಿರುವ ಖಾಯಂ/ನಿವೃತ್ತ ಉದ್ಯೋಗಿಗಳ ವಿರುದ್ಧ ಸಿದ್ಧಪಡಿಸಿರುವ ದೋಷಾರೋಪಣ ಪಟ್ಟಿಯನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು ಹಾಗೂ ಈ ಪ್ರಕರಣದ ಇಲಾಖಾ ವಿಚಾರಣೆ ನಡೆಸುವ ಸಲುವಾಗಿ ವಿಚಾರಣಾಧಿಕಾರಿಯನ್ನು ಮತ್ತು ವಿಚಾರಣೆ ಸಮಯದಲ್ಲಿ ವಿಶ್ವವಿದ್ಯಾನಿಲಯದ ಪರವಾಗಿ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದ ಮಂಡಿಸಲು ಮಂಡನಾಧಿಕಾರಿಯನ್ನು ನೇಮಿಸುವ ಅಧಿಕಾರವನ್ನು ಕುಲಪತಿಯವರಿಗೆ ನೀಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| **2019/12.22** | **School of Planning and Architecture** ವಿಭಾಗದ ಅಧ್ಯಾಪಕರುಗಳಿಗೆ ಯುಜಿಸಿ ವೇತನ ನಿಗದಿಪಡಿಸಿ ಪಾವತಿಸಿರುವ ಬಗೆಗಿನ ಆಡಿಟ್ ಆಕ್ಷೇಪಣೆ ಬಗ್ಗೆ. |
| **ತೀರ್ಮಾನ** | **School of Planning and Architecture** ವಿಭಾಗದ ಅಧ್ಯಾಪಕರುಗಳಿಗೆ ಯುಜಿಸಿ ವೇತನ ನಿಗದಿಪಡಿಸಿ ಪಾವತಿಸಿರುವ ಬಗೆಗಿನ ಆಡಿಟ್ ಆಕ್ಷೇಪಣೆಯ ಹಿನ್ನೆಲೆಯಲ್ಲಿ ಬೋಧಕ ಸಿಬ್ಬಂದಿಗಳ ಸೇವಾ ಪುಸ್ತಕಗಳನ್ನು ತೆರೆಯಲು ಮತ್ತು ಸಮಿತಿಯನ್ನು ರಚಿಸಿ ಇದರ ಬಗ್ಗೆ ಚರ್ಚಿಸಲು ಹಾಗೂ ಹಣಕಾಸು ಅಧಿಕಾರಿಯವರು ಇದಕ್ಕೆ ಸಂಬಂಧಪಟ್ಟ ದಾಖಲಾತಿಗಳು/ಪರಿನಿಯಮ ಒದಗಿಸಲು ಸೂಕ್ತ ಕ್ರಮ ತೆಗೆದುಕೊಳ್ಳಬೇಕಾಗಿ ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. ಹಾಗೂ ಸಂಬಳಕ್ಕೆ ಸಂಬಂಧಿಸಿದಂತೆ ಆಡಿಟ್ ಆಕ್ಷೇಪಣೆ ಇದ್ದಲ್ಲಿ ನಮ್ಮ ವಿಶ್ವವಿದ್ಯಾನಿಲಯದ ಅನುದಾನದಿಂದ ನೀಡುವುದಾಗಿ ತೀರ್ಮಾನಿಸಲಾಯಿತು. |
| **2019/12.23** | ಡಾ.ವಿ.ರಾಜಗೋಪಾಲ ರೆಡ್ಡಿ, ಪ್ರಾಧ್ಯಾಪಕರು, ಭೌತಶಾಸ್ತ್ರ ವಿಭಾಗ, ಶ್ರೀ ವೆಂಕಟೇಶ್ವರ ವಿಶ್ವವಿದ್ಯಾನಿಲಯ, ತಿರುಪತಿ ಇವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸಲ್ಲಿಸಿರುವ ಪಿಂಚಣಿ ಸೇವಾವಧಿಯ **Pro-Rata** ಪಿಂಚಣಿ ಸೌಲಭ್ಯಗಳನ್ನು ಶ್ರೀ ವೆಂಕಟೇಶ್ವರ ವಿಶ್ವವಿದ್ಯಾನಿಲಯ, ತಿರುಪತಿ ಇಲ್ಲಿಗೆ ವರ್ಗಾಯಿಸುವಂತೆ ಕೋರಿರುವ ಬಗ್ಗೆ. |
| **ತೀರ್ಮಾನ** | ಡಾ.ವಿ.ರಾಜಗೋಪಾಲ ರೆಡ್ಡಿ, ಪ್ರಾಧ್ಯಾಪಕರು, ಭೌತಶಾಸ್ತ್ರ ವಿಭಾಗ, ಶ್ರೀ ವೆಂಕಟೇಶ್ವರ ವಿಶ್ವವಿದ್ಯಾನಿಲಯ, ತಿರುಪತಿ ಇವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸಲ್ಲಿಸಿರುವ ಪಿಂಚಣಿ ಸೇವಾವಧಿಯ **Pro-Rata** ಪಿಂಚಣಿ ಸೌಲಭ್ಯಗಳನ್ನು ಶ್ರೀ ವೆಂಕಟೇಶ್ವರ ವಿಶ್ವವಿದ್ಯಾನಿಲಯ, ತಿರುಪತಿ ಇಲ್ಲಿಗೆ ವರ್ಗಾಯಿಸುವಂತೆ ಕೋರಿರುತ್ತಾರೆ. ಆದರೆ ರಾಜ್ಯದಿಂದ ರಾಜ್ಯಕ್ಕೆ **Pro-Rata** ಪಿಂಚಣಿ ಸೌಲಭ್ಯಗಳು ಅನ್ವಯವಾಗುವುದಿಲ್ಲ ಮತ್ತು ವಿಶ್ವವಿದ್ಯಾನಿಲಯದ ಪರಿನಿಯಮ ಪ್ರಕಾರ ಪಿಂಚಣಿ ವಂತಿಕೆಯನ್ನು ನೀಡುವುದಕ್ಕೆ ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| **2019/12.24** | ಸಿಎಎಸ್ ಪದೋನ್ನತಿ ಹಾಗೂ ಇತರ ವಿಷಯಗಳ ಸಂಬಂಧ ಕಾನೂನು ಸಲಹೆಗಾರರು ನೀಡಿರುವ ಅಭಿಪ್ರಾಯದ ಬಗ್ಗೆ. |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಅರ್ಹ ಅಧ್ಯಾಪಕರುಗಳಿಗೆ ಸಿಎಎಸ್ ಅಡಿಯಲ್ಲಿ ೨೦೧೮ ಮತ್ತು ೨೦೧೯ನೇ ವರ್ಷದ ಜೂನ್‌ವರೆಗೆ ಪ್ರಕ್ರಿಯೆಗಳನ್ನು ನಡೆಸಿ ಪದೋನ್ನತಿ ನೀಡಲಾಗಿತ್ತು. ಹೀಗೆ ನೀಡಿದ ಪದೋನ್ನತಿಗಳಲ್ಲಿ ಕೆಲವು ತಾರತಮ್ಯಗಳಿದ್ದು, ಇದನ್ನು ಸರಿಪಡಿಸುವಂತೆ ಹಲವು ಅಧ್ಯಾಪಕರುಗಳು ಮನವಿ |

| | |
|---|---|
| | ಸಲ್ಲಿಸಿದರು. ಈ ಕುರಿತು ಅಧ್ಯಾಪಕರುಗಳ ಮನವಿಗಳನ್ನು ನಿಯಮಾನುಸಾರ ಪರಿಶೀಲಿಸಲು ಪ್ರೊ.ಟಿ.ಕೆ.ಉಮೇಶ್‌ರವರ ಅಧ್ಯಕ್ಷತೆಯಲ್ಲಿ ನಡೆದ ಸಮಿತಿಯ ವರದಿಯನ್ನು ಕಾನೂನು ಅಭಿಪ್ರಾಯಕ್ಕೆ ಒಳಪಡಿಸಿ ಸಿಂಡಿಕೇಟ್ ಸಭೆಗೆ ಮಂಡಿಸಲಾಗಿತ್ತು. ಸಿಂಡಿಕೇಟ್ ಸಭೆಯು ಕಾನೂನು ಅಭಿಪ್ರಾಯವನ್ನು ಅನುಮೋದಿಸಿ, ಕಾರ್ಯಾನುಷ್ಠಾನಕ್ಕೆ ಒಪ್ಪಿಗೆ ನೀಡಿತು. |
| **2019/12.25** | ಉತ್ತರ ಪತ್ರಿಕೆಯ ಟೆಂಡರ್ ತಾಂತ್ರಿಕ ಪರಿಶೀಲನಾ ಸಮಿತಿ ಸಭೆಯ ವರದಿ |
| **ತೀರ್ಮಾನ** | ದಿನಾಂಕ 2-12-2019 ರಂದು ನಡೆದ ಉತ್ತರ ಪತ್ರಿಕೆಯ ಟೆಂಡರ್ ತಾಂತ್ರಿಕ ಪರಿಶೀಲನಾ ಸಮಿತಿ ಸಭೆಯು ಈ ಕೆಳಕಂಡಂತೆ ನಿರ್ಣಯವನ್ನು ತೆಗೆದುಕೊಂಡಿರುತ್ತದೆ:<br>1. ಮೆ.ಮದ್ದಾಲ ಇಂಡಸ್ಟ್ರೀಸ್, ಗುಂಟೂರು ರವರ ಟೆಂಡರ್‌ನ್ನು ರದ್ದುಪಡಿಸಿತು ಹಾಗೂ ಇನ್ನು ಮುಂದೆ ಮೈಸೂರು ವಿಶ್ವವಿದ್ಯಾನಿಲಯದ ಯಾವುದೇ ಟೆಂಡರ್ ಪ್ರಕ್ರಿಯೆಗೆ ಭಾಗವಹಿಸಬಾರದೆಂದು ನಿರ್ಣಯಿಸಿತು.<br>2. ಮೆ. ಮದ್ದಾಲ ಇಂಡಸ್ಟ್ರೀಸ್, ಗುಂಟೂರು ಇವರನ್ನು ಕಪ್ಪುಪಟ್ಟಿಯಲ್ಲಿ ಸೇರಿಸುವಂತೆಯೂ ಸಹ ತೀರ್ಮಾನಿಸಲಾಯಿತು.<br>3. ಕರಾರು ಒಪ್ಪಂದದ ಪ್ರಕಾರ ಸದರಿಯವರು ಸಲ್ಲಿಸುವ ಹುಂಡಿಯಲ್ಲಿ ಶೇ.25% ರಷ್ಟು ಕಡಿತಗೊಳಿಸಲು ಸಹ ತೀರ್ಮಾನಿಸಲಾಯಿತು.<br>ಸಿಂಡಿಕೇಟ್ ಸಭೆಯ ವರದಿ ಹಾಗೂ ದಿನಾಂಕ 2-12-2019 ರಂದು ನಡೆದ ಸಭೆಯ ತೀರ್ಮಾನವನ್ನು ಗಮನಿಸಿದ ನಂತರ ಮತ್ತೆ ಟೆಂಡರ್ ಪ್ರಕ್ರಿಯೆ ನಡೆಸಲು ತೀರ್ಮಾನಿಸಿತು. |
| **2019/12.26** | ಮೈಸೂರು ವಿಶ್ವವಿದ್ಯಾನಿಲಯದ ಅಧ್ಯಾಪಕರುಗಳು ಎಜಿಪಿ-7000, ಎಜಿಪಿ-8000 ಮತ್ತು ಎಜಿಪಿ-10000ಕ್ಕೆ ಪದೋನ್ನತಿ ಹೊಂದಿರುವ ಪ್ರಯುಕ್ತ ವೇತನ ನಿಗದಿಪಡಿಸಿ ಹೊರಡಿಸಿರುವ ಆದೇಶಗಳನ್ನು ಮಾರ್ಪಡಿಸಿ ವೇತನ ಬಡ್ತಿಗಳನ್ನು ಸೇರಿಸಿ ಪರಿಷ್ಕೃತ ಆದೇಶ ನೀಡುವಂತೆ ಮನವಿ ಸಲ್ಲಿಸಿರುವ ಬಗ್ಗೆ. |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯದ ಅಧ್ಯಾಪಕರುಗಳು ಎಜಿಪಿ-7000, ಎಜಿಪಿ-8000 ಮತ್ತು ಎಜಿಪಿ-10000ಕ್ಕೆ ಪದೋನ್ನತಿ ಹೊಂದಿರುವ ಪ್ರಯುಕ್ತ ವೇತನ ನಿಗದಿಪಡಿಸಿ ಹೊರಡಿಸಿರುವ ಆದೇಶಗಳನ್ನು ಮಾರ್ಪಡಿಸಿ ವೇತನ ಬಡ್ತಿಗಳನ್ನು ಸೇರಿಸಿ ಪರಿಷ್ಕೃತ ಆದೇಶ ನೀಡುವ ಸಂಬಂಧ ವಿಶ್ವವಿದ್ಯಾನಿಲಯದ ಹಣಕಾಸು ಅಧಿಕಾರಿಗಳು ನೀಡಿರುವ ಅಭಿಪ್ರಾಯವನ್ನು ಅನುಮೋದಿಸಿ ಅದರಂತೆ ಕ್ರಮಕೈಗೊಳ್ಳಲು ಮತ್ತು ಆರ್ಥಿಕ ಸೌಲಭ್ಯವನ್ನು ಸಿಂಡಿಕೇಟ್ ಅನುಮೋದಿಸಿದ ದಿನಾಂಕದಿಂದ ನೀಡಲು ಸಿಂಡಿಕೇಟ್ ತೀರ್ಮಾನಿಸಿತು. |
| **2019/12.27** | **International College of Financial Planning, 169/1, New No.29/1, 3rd stage, Industrial Suburb, Fort Mohalla Manandhavadi Road, Specialized Centre, Mysuru** ಇವರಿಗೆ ಈಗಾಗಲೇ ವಿಶ್ವವಿದ್ಯಾನಿಲಯದ ಮಾನ್ಯತೆ ಪಡೆದು ವಿವಿಧ ವಿಷಯಗಳಲ್ಲಿ ನಡೆಸುತ್ತಿರುವ ಕೋರ್ಸುಗಳ ಜೊತೆಗೆ ಹೆಚ್ಚುವರಿಯಾಗಿ 1) B.B.A (Enterpreneurship) (2) B.B.A (Financial Planning) ವಿಷಯಗಳಿಗೆ ಮಾನ್ಯತೆ ನೀಡುವ ಬಗ್ಗೆ ಪರಿವೀಕ್ಷಣಾ ಸಮಿತಿ ಸಲ್ಲಿಸಿರುವ ವರದಿಗೆ ಅನುಮೋದನೆ ಕೋರಿ. |
| ತೀರ್ಮಾನ | **International College of Financial Planning, 169/1, New No.29/1, 3rd stage, Industrial Suburb, Fort Mohalla Manandhavadi Road, Specialized Centre, Mysuru** ಇವರಿಗೆ ಈಗಾಗಲೇ ವಿಶ್ವವಿದ್ಯಾನಿಲಯದ ಮಾನ್ಯತೆ ಪಡೆದು ವಿವಿಧ ವಿಷಯಗಳಲ್ಲಿ ನಡೆಸುತ್ತಿರುವ ಕೋರ್ಸುಗಳ ಜೊತೆಗೆ ಹೆಚ್ಚುವರಿಯಾಗಿ **(1) B.B.A (Enterpreneurship) (2) B.B.A (Financial Planning)** ವಿಷಯಗಳಿಗೆ ಮಾನ್ಯತೆ ನೀಡುವ ಬಗ್ಗೆ ಪರಿವೀಕ್ಷಣಾ ಸಮಿತಿ ಸಲ್ಲಿಸಿರುವ ವರದಿಯನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |

| | |
|---|---|
| 2019/12.28 | **International College of Financial Planning, 169/1, New No.29/1, 3rd stage, Industrial Suburb, Fort Mohalla Manandhavadi Road, Mysuru Specialized** ಕೇಂದ್ರದ ವಿಳಾಸವನ್ನು **International College of Financial Planning, Maharaja Institute of Technology, 2nd Floor, Belawadi, Srirangapatna Taluk, Mandya-571438** ಇಲ್ಲಿಗೆ ಸ್ಥಳ ಬದಲಾವಣೆ ಮಾಡುವ ಸಂಬಂಧ ಪರಿವೀಕ್ಷಣಾ ಸಮಿತಿ ಸಲ್ಲಿಸಿರುವ ವರದಿಗೆ ಅನುಮೋದನೆ ಕೋರಿ. |
| **ತೀರ್ಮಾನ** | **International College of Financial Planning, 169/1, New No.29/1, 3rd stage, Industrial Suburb, Fort Mohalla Manandhavadi Road, Mysuru Specialized** ಕೇಂದ್ರದ ವಿಳಾಸವನ್ನು **International College of Financial Planning, Maharaja Institute of Technology, 2nd Floor, Belawadi, Srirangapatna Taluk, Mandya-57143**8 ಇಲ್ಲಿಗೆ ಸ್ಥಳ ಬದಲಾವಣೆ ಮಾಡುವ ಸಂಬಂಧ ಪರಿವೀಕ್ಷಣಾ ಸಮಿತಿ ಸಲ್ಲಿಸಿರುವ ವರದಿಯನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| 2019/12.29 | **Universal Institute, Kuwait,** ಇವರು ಮೈಸೂರು ವಿಶ್ವವಿದ್ಯಾನಿಲಯದ **Specialized Programme** ಅಡಿಯಲ್ಲಿ **BBA, Integrated MBA, Bachelor in Interior Designing** ಕೋರ್ಸುಗಳನ್ನು ಪ್ರಾರಂಭಿಸಲು ಮಾನ್ಯತೆ ಕೋರಿರುವ ಬಗೆಗೆ. |
| **ತೀರ್ಮಾನ** | ಪ್ರತ್ಯೇಕವಾದ ಸಮಿತಿಯನ್ನು ರಚಿಸಿ, ಆ ಸಮಿತಿಯು ಭೇಟಿ ನೀಡಿ ಮೂಲ ಸೌಕರ್ಯವನ್ನು ಪರೀಕ್ಷಿಸಿ ವರದಿಯನ್ನು ಸಲ್ಲಿಸಿದ ನಂತರ **Universal Institute, Kuwait**, ಇವರು ಮೈಸೂರು ವಿಶ್ವವಿದ್ಯಾನಿಲಯದ **Specialized Programme** ಅಡಿಯಲ್ಲಿ **BBA, Integrated MBA, Bachelor in Interior Designing** ಕೋರ್ಸುಗಳನ್ನು ಪ್ರಾರಂಭಿಸಲು ಮಾನ್ಯತೆಯನ್ನು ನೀಡಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| 2019/12.30 | ಇಂಗ್ಲಿಷ್ ಅಧ್ಯಯನ ವಿಭಾಗದ ಸ್ನಾತಕೋತ್ತರ ವಿದ್ಯಾರ್ಥಿಗಳು ಮತ್ತು ಸಂಶೋಧನಾ ವಿದ್ಯಾರ್ಥಿಗಳಿಂದ ಬಂದಿರುವ ದೂರುಗಳ ಬಗ್ಗೆ |
| | ಇಂಗ್ಲಿಷ್ ಅಧ್ಯಯನ ವಿಭಾಗದಲ್ಲಿ ಹಲವಾರು ತಿಂಗಳುಗಳಿಂದ ಅನೇಕ ಸಮಸ್ಯೆಗಳಿದ್ದು ಈ ಬಗ್ಗೆ ವಿದ್ಯಾರ್ಥಿಗಳು ಮತ್ತು ಸಂಶೋಧನಾ ವಿದ್ಯಾರ್ಥಿಗಳು ವಿಭಾಗದ ಅಧ್ಯಕ್ಷರ ಮೇಲೆ ಅನೇಕ ದೂರುಗಳನ್ನು ಸಲ್ಲಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ವಿಭಾಗದ ಕಾರ್ಯಚಟುವಟಿಕೆಗಳು ಸುಲಲಿತವಾಗಿ ಜರುಗಬೇಕೆನ್ನುವ ಕಾರಣದಿಂದ ವಿಶ್ವವಿದ್ಯಾನಿಲಯವು ಹೊರಡಿಸಿದ ಆಡಳಿತಾತ್ಮಕ ಆದೇಶಗಳನ್ನು ಸಹ ಪಾಲಿಸಿರುವುದಿಲ್ಲ ಹಾಗೂ ಕೆಲವು ಬೋಧಕ ವರ್ಗದವರು ಪರಸ್ಪರ ದೂರುಗಳನ್ನು ಸಲ್ಲಿಸಿರುವುದನ್ನು ಮಾನ್ಯ ಕುಲಪತಿಗಳು ಸಭೆಯ ಗಮನಕ್ಕೆ ತಂದರು. ಮತ್ತು ವಿಭಾಗದಲ್ಲಿ ವೇಳಾಪಟ್ಟಿಯಂತೆ ತರಗತಿಗಳನ್ನು ತೆಗೆದುಕೊಳ್ಳದೇ ಇರುವ ಬಗೆಗೆ ದೂರು ಬಂದ ಹಿನ್ನೆಲೆಯಲ್ಲಿ ಕುಲಸಚಿವರು ವಿಭಾಗಕ್ಕೆ ಭೇಟಿ ನೀಡಿ ಪರಿಶೀಲಿಸಿದಾಗ ದೃಢಪಟ್ಟಿರುತ್ತದೆ. ಈ ಸಂಬಂಧ ವಿಭಾಗಾಧ್ಯಕ್ಷರಾದ ಪ್ರೊ. ದೇವಿಕಾರಾಣಿಯವರಿಗೆ ಹಾಗೂ ಶ್ರೀ ರಮೇಶ್ ಜಯರಾಮಯ್ಯನವರಿಗೆ ಕಾರಣ ಕೇಳುವ ನೋಟಿಸ್ ಜಾರಿಮಾಡಲಾಗಿದೆ ಎಂದು ತಿಳಿಸುತ್ತಾ ಈ ಬಗ್ಗೆ ಸಭೆಯು ಚರ್ಚಿಸಿ ಸೂಕ್ತ ತೀರ್ಮಾನ ತೆಗೆದುಕೊಳ್ಳಬೇಕಿದೆ ಎಂದು ತಿಳಿಸಿದರು. |
| **ತೀರ್ಮಾನ** | ಎಲ್ಲಾ ಲಿಖಿತ ದೂರುಗಳನ್ನು ಪರಿಶೀಲಿಸಿ ಸುದೀರ್ಘವಾಗಿ ಚರ್ಚಿಸಿದ ನಂತರ ಈ ಕೆಳಕಂಡ ನಿರ್ಣಯಗಳನ್ನು ಕೈಗೊಳ್ಳಲು ತೀರ್ಮಾನಿಸಿತು.<br>1. ಪ್ರೊ. ಮಹದೇವ ಇವರು ದಿನಾಂಕ 30-11-2019ರಂದು ನಿವೃತ್ತಿ ಹೊಂದಿದ್ದು 1-12-2019ಕ್ಕೆ ಪೂರ್ವಾನ್ವಯವಾಗುವಂತೆ ಚಾತುರ್ಮಾಸದ ಅಂತ್ಯದವರೆಗೆ ಅವರನ್ನು ನಿಯಮಾನುಸಾರ ಮುಂದುವರೆಸಲು;<br>2. ಇಂಗ್ಲಿಷ್ ಅಧ್ಯಯನ ವಿಭಾಗದಲ್ಲಿನ ಕೆಲಸಕಾರ್ಯಗಳು ಸುಸೂತ್ರವಾಗಿ ನಡೆಯಬೇಕೆನ್ನುವ ಉದ್ದೇಶದಿಂದ ಪ್ರೊ. ದೇವಿಕಾರಾಣಿಯವರನ್ನು ವಿಭಾಗದ ಅಧ್ಯಕ್ಷ ಹುದ್ದೆಯಿಂದ ಬಿಡುಗಡೆಗೊಳಿಸಿ ಇವರ ಬದಲಿಗೆ ವಿಭಾಗದಲ್ಲಿನ ಹಿರಿಯ ಪ್ರಾಧ್ಯಾಪಕರಾದ ಪ್ರೊ. ರುದ್ರಮುನಿ.ಎಂ.ಎಚ್. ಇವರನ್ನು ಮುಂದಿನ |

| | |
|---|---|
| | ಆದೇಶದವರೆಗೆ ನಿಯಮಾನುಸಾರ ತಕ್ಷಣದಿಂದ ಜಾರಿಗೆ ಬಂದಂತೆ ನೇಮಿಸುವುದು;<br>3. ಪ್ರೊ. ಮಹದೇವ ಅವರ ಮೇಲೆ ಪ್ರೊ. ದೇವಿಕಾರಾಣಿಯವರು ಲಿಖಿತ ದೂರನ್ನು ಸಲ್ಲಿಸಿದ್ದು ಆ ಬಗ್ಗೆ ವಿವರಣೆಯನ್ನು ಮೂರು ದಿವಸಗಳೊಳಗೆ ತಲುಪಿಸುವಂತೆ ಕಾರಣ ಕೇಳುವ ನೋಟಿಸನ್ನು ಜಾರಿಮಾಡುವುದು;<br>4. ವಿಭಾಗದಲ್ಲಿನ ಸಮಸ್ಯೆಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಆದಷ್ಟು ಬೇಗನೇ ವಿಶ್ವವಿದ್ಯಾನಿಲಯಕ್ಕೆ ವರದಿಯನ್ನು ಸಲ್ಲಿಸುವ ದೃಷ್ಟಿಯಿಂದ ಪ್ರೊ. ಕೆ.ಎಂ.ಮಹದೇವನ್, ಕುಲಸಚಿವ(ಪರೀಕ್ಷಾಂಗ) ಇವರ ಅಧ್ಯಕ್ಷತೆಯಲ್ಲಿ ಈ ಕೆಳಕಂಡಂತೆ ವಿಶೇಷ ವಿಚಾರಣಾ ಸಮಿತಿಯನ್ನು ರಚಿಸಲು;<br><br>1. ಪ್ರೊ. ಕೆ.ಎಂ.ಮಹದೇವನ್, ಕುಲಸಚಿವ(ಪರೀಕ್ಷಾಂಗ) – ಅಧ್ಯಕ್ಷರು<br>2. ಶ್ರೀಮತಿ ಸಹನಾ ಶಿವಪ್ಪ – ಸದಸ್ಯರು<br>ಸಿಂಡಿಕೇಟ್ ಸದಸ್ಯರು<br>3. ಪ್ರೊ. ಅಸೀಮಾ ನುಸ್ರತ್ – ಸದಸ್ಯರು<br>ಭೂಗೋಳಶಾಸ್ತ್ರ ಅಧ್ಯಯನ ವಿಭಾಗ<br>4. ಪ್ರೊ. ಕೆ.ಕೆ.ವಿಶಾಲಾಕ್ಷಿ – ಸದಸ್ಯರು<br>ಸಿಂಡಿಕೇಟ್ ಸದಸ್ಯರು<br>5. ಉಪಕುಲಸಚಿವ(ಸಾಮಾನ್ಯ) – ಸಂಚಾಲಕರು |
| **2019/12.31** | ಶ್ರೀಮತಿ ಮೊನಾಲಿಪ ದಾಶ್, ಸಹ ಪ್ರಾಧ್ಯಾಪಕರು, ಇವರು ಉನ್ನತ ಶಿಕ್ಷಣ ವ್ಯಾಸಂಗಕ್ಕೆ ವಿಶ್ವವಿದ್ಯಾನಿಲಯದಿಂದ ಪೂರ್ವಾನುಮತಿ ಪಡೆಯದೇ ವಿದೇಶಕ್ಕೆ ತೆರೆಳಿರುವ ಬಗ್ಗೆ. |
| **ತೀರ್ಮಾನ** | ಶ್ರೀಮತಿ ಮೊನಾಲಿಪ ದಾಶ್, ಸಹ ಪ್ರಾಧ್ಯಾಪಕರು, ಇವರು ಉನ್ನತ ಶಿಕ್ಷಣ ವ್ಯಾಸಂಗಕ್ಕೆ ವಿಶ್ವವಿದ್ಯಾನಿಲಯದಿಂದ ಪೂರ್ವಾನುಮತಿ ಪಡೆಯದೇ ವಿದೇಶಕ್ಕೆ ತೆರೆಳಿರುವುದನ್ನು ಗಮನಿಸಿ ಮತ್ತೆ ಈ ರೀತಿ ಮರುಕಳಿಸಿದಂತೆ ನೋಟಿಸ್ ಜಾರಿ ಮಾಡಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| **2019/12.32** | ಎಲ್ಲಾ **Outreach Programmes and Specialized Courses** ಗಳಿಗೆ ಸಂಬಂಧಿಸಿದಂತೆ ಪರೀಕ್ಷಾ ಶುಲ್ಕ ಹಾಗೂ ಇನ್ನಿತರ ಪರೀಕ್ಷಾ ಸೇವಾ ಶುಲ್ಕಗಳನ್ನು ಪುನರ್ ನಿಗಧಿಪಡಿಸುವ ಬಗ್ಗೆ. |
| **ತೀರ್ಮಾನ** | ಎಲ್ಲಾ **Outreach Programmes and Specialized Courses** ಗಳಿಗೆ ಸಂಬಂಧಿಸಿದಂತೆ ಪರೀಕ್ಷಾ ಶುಲ್ಕ ಹಾಗೂ ಇನ್ನಿತರ ಪರೀಕ್ಷಾ ಸೇವಾ ಶುಲ್ಕಗಳನ್ನು ಪುನರ್ ನಿಗಧಿಪಡಿಸುವ ಸಂಬಂಧ ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಒಳಪಡುವ ಎಲ್ಲಾ ಕಾಲೇಜು/ಸಂಸ್ಥೆಗಳ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಮತ್ತು ಸಾಮಾಜಿಕ/ಆರ್ಥಿಕ ಹಾಗೂ ವಿಶ್ವವಿದ್ಯಾನಿಲಯದ ಘನತೆಗೆ ಧಕ್ಕೆಬಾರದ ರೀತಿಯಲ್ಲಿ ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ೨೦೨೦–೨1ನೇ ಸಾಲಿನಿಂದ ಶುಲ್ಕಗಳನ್ನು ಈಗಿರುವ ೦೫ ಪಟ್ಟು (ವಿಶ್ವವಿದ್ಯಾನಿಲಯದ ನಿಗಧಿತ ಶುಲ್ಕದ 1:5 ರ ಅನುಪಾತ) ವಿಧಿಸುವ ಬದಲಾಗಿ ೦೨ ಪಟ್ಟು (1:2 ರ ಅನುಪಾತ) ನಿಗಧಿಗೊಳಿಸಲು ಸಭೆಯು ಸರ್ವಾನುಮತದಿಂದ ಒಪ್ಪಿ ಅನುಮೋದಿಸಿರುವುದನ್ನು ಸಿಂಡಿಕೇಟ್ ಸಭೆಯು ಒಪ್ಪಿತ್ತು. |
| **2019/12.33** | University of Mysore Online Programmes – reg. |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯದಲ್ಲಿ Online Programmes ನಡೆಸಲು "University 18 Trust" £ªg UGC C£ÄªÆÃ¢¹gÄª "U18 Evolute" Technology Platform ನಲ್ಲಿ ನಡೆಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| **2019/12.34** | Promotions To University Teachers Under UGC CAS |
| **ತೀರ್ಮಾನ** | The recommendations of the Selection Committee and Screening cum Evaluation Committees of various subjects for promotion of teachers in respective subjects and to the higher AGP placed before the Syndicate (Appendix – A) are approved. |

| | |
|---|---|
| | Further, the Syndicate decided to extend the monetary benefits to the teachers who have applied/submitted their applications on or before 31-12-2018 in the prescribed form are eligible from 1st February 2019.<br><br>The Syndicate also resolved to extend the monetary benefits to the teachers from the date of decision of the Syndicate (9-12-2019) or from the date of eligibility whichever is later for those who have applied for **Second time** during the present calendar year to the higher positions vide Circular No. ET-8/126/2014-15 Dated 1-2-2019 and Other Notifications Notified in the earlier dates. |

**ಇತರೆ ವಿಷಯಗಳು:**

1. ದೂರ ಶಿಕ್ಷಣದಲ್ಲಿ ಸೇವೆ ಸಲ್ಲಿಸಲು ನಿಯೋಜಿಸಲ್ಪಡುವ ಕೋ–ಆರ್ಡಿನೇಟರ್‌ಗಳಿಗೆ ಮಾಸಿಕ ವೇತನವನ್ನು ರೂ.25,000/– ರಿಂದ ರೂ.30,000/– ಕ್ಕೆ ಹೆಚ್ಚಳ ಮಾಡುವುದು ಹಾಗೂ ಪರಿನಿಯಮದಲ್ಲಿ ಅಧೀಕ್ಷಕರೆಂದು ನಮೂದಿಸುವ ಬದಲು ಆಡಳಿತ ಸಂಯೋಜಕರು (Administrative Co-ordinator) ಎಂದು ಬದಲಾವಣೆ ಮಾಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.

2. ವಿಶ್ವವಿದ್ಯಾನಿಲಯದ ಮೌಲ್ಯಮಾಪನಕ್ಕಾಗಿ 2011–12 ರಿಂದ 2018–19 ರವರೆಗೆ ಸಿದ್ಧವಾಗಿರುವ ಎಂಟು ವರ್ಷಗಳ ಗುಣಮಟ್ಟ ಮೌಲ್ಯಮಾಪನ ವರದಿಗಳ **(Annual Quality Assessment Report–AQAR)** ಕರಡು ಪ್ರತಿಗಳನ್ನು ಸಿಂಡಿಕೇಟ್ ಸಭೆಯು ಪರಿಶೀಲಿಸಿ ಅನುಮೋದಿಸಿತು.

ಸಹಿ/–
**ಕುಲಸಚಿವ ಮತ್ತು ಸದಸ್ಯ ಕಾರ್ಯದರ್ಶಿ**

ಸಹಿ/–
**ಕುಲಪತಿ ಮತ್ತು ಅಧ್ಯಕ್ಷರು**